Reg. No. : ....................................

Name : ..........................................

**SY-16**

# SECOND YEAR HIGHER SECONDARY EXAMINATION, MARCH 2022

Part – III

**KANNADA (Optional)**

Maximum : 80 Scores

Time : **2½** Hours

Cool-off time : **15** Minutes

ವಿದ್ಯಾರ್ಥಿಗಳಿಗೆ ಸೂಚನೆಗಳು :

- ಮೊದಲ **15** ನಿಮಿಷ 'ಕೂಲ್ ಆಫ್ ಸಮಯ' ವಾಗಿದೆ. ಪ್ರಶ್ನೆಗಳನ್ನು ಓದಿ ಅರ್ಥೈಸಿಕೊಳ್ಳುವುದಕ್ಕೂ ಉತ್ತರಗಳ ಬಗ್ಗೆ ಯೋಚಿಸುವುದಕ್ಕೂ ಈ ಸಮಯವನ್ನು ಬಳಸಿಕೊಳ್ಳಬಹುದು.
- ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಸರಿಯಾಗಿ ಓದಿ ಅರ್ಥೈಸಿಕೊಂಡ ಮೇಲೆ ಉತ್ತರ ಬರೆಯಿರಿ.
- ಉತ್ತರ ಬರೆಯುವಾಗ ಅಂಕ, ಸಮಯ ಮೊದಲಾದವುಗಳನ್ನು ಪರಿಗಣಿಸಬೇಕು.
- ಕೊಟ್ಟಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ.

## PART-I

### A

**(1 ರಿಂದ 6 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ) (4 × 1 = 4)**

1. ಸರಸೋಕ್ತಿ – ಈ ಪದವನ್ನು ವಿಂಗಡಿಸಿ ಬರೆಯಿರಿ.
2. ರಾಕಾಶಶಾಂಕ – ಈ ಪದದ ಅರ್ಥವನ್ನು ಬರೆಯಿರಿ.
3. ಸಿಂಹ – ಈ ಪದದ ತದ್ಭವ ರೂಪವನ್ನು ಬರೆಯಿರಿ.
4. ಇಳೆ – ಈ ಪದಕ್ಕೆ ಎರಡು ಪರ್ಯಾಯ ಪದಗಳನ್ನು ನೀಡಿರಿ.
5. ಮಾಡು – ಈ ಪದದ ನಿಷೇದಾರ್ಥ ರೂಪವನ್ನು ಬರೆಯಿರಿ.
6. ಕೈಮುಗಿ – ಈ ಪದದ ವಿಗ್ರಹವಾಕ್ಯ ಬರೆಯಿರಿ.

### B

**(7 ರಿಂದ 10 ರ ವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ) (4 × 1 = 4)**

7. 'ರಗಳೆ' ಛಂದಸ್ಸಿನಲ್ಲಿ ಕಾವ್ಯವನ್ನು ರಚಿಸಿ ಪ್ರಸಿದ್ಧನಾದವನು ಯಾರು ?
   (ಮುದ್ದಣ, ಲಕ್ಷ್ಮೀಶ, ಹರಿಹರ, ರತ್ನಾಕರವರ್ಣಿ)
8. 'ನೀನೆನ್ನಂತರಂಗದೊಳ್ ಗುಪ್ತಳಾಗು' ಶ್ರೀಮತಿ ಸ್ವಯಂವರ ಪಾಠದಲ್ಲಿ ಬಂದಿರುವ ಈ ಮಾತನ್ನು ಹೇಳಿದವರು ಯಾರು ?
   (ನಾರದ, ಪರ್ವತ, ವಿಷ್ಣು, ಶ್ರೀಮತಿ)

9. ‘ಹರಳುಗಟ್ಟಿದ ಬಗೆ’ ಪಾಠಭಾಗವು ಸಾಹಿತ್ಯದ ಯಾವ ಪ್ರಕಾರಕ್ಕೆ ಸೇರುತ್ತದೆ ?

(ಕಥೆ, ಕಾದಂಬರಿ, ನಾಟಕ, ಆತ್ಮಕಥೆ)

10. ಈ ಕೆಳಗಿನವುಗಳಲ್ಲಿ ಕನ್ನಡದ ಮೊದಲ ಅನುವಾದಿತ ನಾಟಕ ಯಾವುದು ?

(ಮಿತ್ರಾವಿಂದಾ ಗೋವಿಂದ, ಅಭಿಜ್ಞಾನ ಶಾಕುಂತಲ, ಉತ್ತರರಾಮ ಚರಿತೆ, ಚಂಡ ಕೌಶಿಕ)

## PART-II

### A

**(11 ರಿಂದ 15 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ.) (3 × 2 = 6)**

11. ನಿಮ್ಮೂರಿನ ಪ್ರವಾಸಿ ತಾಣದಲ್ಲಿ ಸ್ವಚ್ಛತೆಯ ಅರಿವನ್ನು ಮೂಡಿಸಲು ಅಗತ್ಯವಾದ ಎರಡು ಘೋಷಣಾ ವಾಕ್ಯಗಳನ್ನು ಸಿದ್ಧಪಡಿಸಿರಿ.

12. ಕೆಳಗೆ ನೀಡಲಾದ ಮಿಶ್ರವಾಕ್ಯವನ್ನು ಎರಡು ಸರಳ ವಾಕ್ಯಗಳಾಗಿ ಬರೆಯಿರಿ.

ನುರಿತ ಚಿತ್ರಕಲಾವಿದನಾದ ಕೇಶವನ ಬಳಿ ಸುಮಾರು ನೂರಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಚಿತ್ರ ಕಲೆಯನ್ನು ಅಭ್ಯಾಸ ಮಾಡುತ್ತಿದ್ದರು.

13. ‘ಅಧಿಕಾರ ಅಂತಸ್ತು ತರತ್ತೆ

ಅಂತಸ್ತು ಅಂತರ ತರತ್ತೆ’

ಮಂಥರೆಯ ಈ ಮಾತಿನ ಆಶಯವನ್ನು ಬರೆಯಿರಿ.

14. ‘ಮನದೊಲವರಮುಳ್ಳೊಡೆ ಕುಡು ಮನೆಯೊಳ್ ಹರಿಗಗ್ರಪೂಜೆಯಂ,’ ‘ಸಲಿಸುವೆಂ ನೂರುವರಂ’ ಪಾಠದಲ್ಲಿ ಬರುವ ಈ ಮಾತಿನ ಸಂದರ್ಭವನ್ನು ತಿಳಿಸಿರಿ.

15. ಕೆಳಗೆ ನೀಡಲಾದ ವಾಕ್ಯವನ್ನು ಶಿಷ್ಟಗನ್ನಡ ರೂಪಕ್ಕೆ ಪರಿವರ್ತಿಸಿ ಬರೆಯಿರಿ.

ಮದವಿ ಆಗಿ ಬಂದ ಮ್ಯಾಲೆ ಈ ಮುದಿರಾಯ ಇಲ್ಲಾತಳ ಊರಿ ಕುಂತು ಬಿಟ್ಟ.

### B

**(16 ರಿಂದ 18 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ) (2 × 2 = 4)**

16. ಪಂಚದ್ರಾವಿಡ ಭಾಷೆಗಳನ್ನು ಹೆಸರಿಸಿರಿ.

17. ಅಡಿಗೆರೆ ಎಳೆದ ಪದವನ್ನು ಬಳಸಿಕೊಂಡು ವಾಕ್ಯವೊಂದನ್ನು ರಚಿಸಿರಿ.

ತುಳುನಾಡ ಸಂಸ್ಕೃತಿಯನ್ನು <u>ಪ್ರತಿಬಿಂಬಿಸುವ</u> ಕಲಾಕೃತಿಯು ಗಣರಾಜ್ಯ ದಿನದ ಪೆರೇಡ್‌ನಲ್ಲಿ ಎದ್ದು ಕಾಣುತ್ತಿತ್ತು.

18. ಅನ್ಯದೇಶೀಯ ಪದಗಳಿಗೆ ಎರಡು ಉದಾಹರಣೆಯನ್ನು ಬರೆಯಿರಿ.

## PART-III

### A

**(19 ರಿಂದ 23 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ)** **(3 × 4 = 12)**

19. ಸರಿ ಹೊಂದಿಸಿ ಬರೆಯಿರಿ.

| ಅ | ಆ |
|---|---|
| ಉಲ್ಲಂಘಿಸುವರುಂಟೆ ವಿಧಿಕೃತವನು | ಪಂಪ |
| ಧರೆಮೆಚ್ಚದಣ್ಣ ಸೋದರರ ಕಾಳಗಕೆ | ಡಾ.ಎಚ್.ಎಸ್. ವೆಂಕಟೇಶ ಮೂರ್ತಿ |
| ಸಲಿಸುವೆಂ ನೂರುವರಂ | ರತ್ನಾಕರವರ್ಣಿ |
| ಮಂಥರಾ | ಲಕ್ಷ್ಮೀಶ |

20. ಕೆಳಗೆ ನೀಡಲಾದ ಪದ್ಯದ ಆಶಯವನ್ನು ಬರೆಯಿರಿ.

ಪರನೊಬ್ಬನೆನ್ನೊಡನಿದಿರಾದರಾಗಳೆ
ಬರಲೊಡನಟ್ಟಿ ಮೆಟ್ಟುವೆನು ।
ಧರೆಮೆಚ್ಚದಣ್ಣ ಸೋದರರ ಕಾಳಗಕೆ ಮುಂ
ದೊರೆಯಬೇಕಂಕ ಪದ್ಧತಿಯಾ

21. ದುಷ್ಟಬುದ್ಧಿಯು ಕಳುಹಿಸಿಕೊಟ್ಟ ಪತ್ರದಲ್ಲಿ ವಿಷಯೆ ಮಾಡಿದ ಮಾರ್ಪಾಟುಗಳೇನು ? ಸಂದರ್ಭದೊಂದಿಗೆ ವಿವರಿಸಿರಿ.

22. ಮೋಡ ಒಡಿದೇ ಮಳೀ ಹೆಂಗ ಬಂದಾವು ?
ಮೊಟ್ಟೆ ಒಡೀದೆ ಮರಿ ಹೆಂಗ ಬಂದಾವು ? – ಈ ಮಾತಿನ ಸ್ವಾರಸ್ಯವನ್ನು ಬರೆಯಿರಿ.

23. ಶ್ರೀಕೃಷ್ಣನು ತನ್ನನ್ನು ನಿಂದಿಸಿ ಮಾತನಾಡಿದ ಶಿಶುಪಾಲನಿಗೆ ನೀಡಿದ ಪ್ರತ್ಯುತ್ತರವೇನು ? ಬರೆಯಿರಿ.

### B

**(24 ರಿಂದ 25 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿರಿ.)** **(1 × 4 = 4)**

24. ಕೆಳಗೆ ನೀಡಲಾದ ಜೀವನಚರಿತ್ರೆಯ ಭಾಗವನ್ನು ಆತ್ಮಕಥೆಯಾಗಿ ಪರಿವರ್ತಿಸಿ ಬರೆಯಿರಿ.

ರಾತ್ರೆ ಮೂರ್ತಿರಾವ್ ಅವರಿಗೆ ನಿದ್ದೆ ಬಂದದ್ದು ತಡವಾಯಿತು. ಆದುದರಿಂದ ಅವರು ಬೆಳಗ್ಗೆ ಏಳುವುದೂ ತಡವಾಯಿತು. ಸುಮಾರು 6 ಗಂಟೆಯ ಹೊತ್ತಿನಲ್ಲಿ ಯಾರೋ ಅವರ ಕೊಠಡಿಯ ಬಾಗಿಲು ತೆರೆದರು. ಅರೆನಿದ್ದೆಯಲ್ಲಿದ್ದ ಮೂರ್ತಿರಾಯರಿಗೆ ಎದ್ದು ನೋಡುವಷ್ಟು ಚಟುವಟಿಕೆಯಿಲ್ಲ. ಅವರು ಏಳೂವರೆ ಘಂಟೆಗೆ ಎದ್ದು ಕೂಡುವ ಕೊಠಡಿಗೆ ಬಂದರು.

25. ಶ್ರೀಮತಿಯ ಸ್ವಯಂವರಕ್ಕೆ ಪಟ್ಟಣವನ್ನು ಯಾವ ರೀತಿ ಅಲಂಕರಿಸಿದ್ದರು ?

## PART-IV

### A

**(26 ರಿಂದ 29 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ)** **(3 × 6 = 18)**

26. ತುಳು ಭಾಷೆಯ ವಿಶೇಷತೆಗಳ ಕುರಿತು ನೀವು ಓದಿದ ಪಾಠದ ಆಧಾರದಲ್ಲಿ ಲೇಖನವೊಂದನ್ನು ಬರೆಯಿರಿ.

27. ಕೆಳಗೆ ಕೊಟ್ಟಿರುವ ಪದ್ಯ ಸಾಲುಗಳ ಆಸ್ವಾದನಾ ಟಿಪ್ಪಣಿಯನ್ನು ಬರೆಯಿರಿ.

    ಬಳಿಕೊರ್ವರೊರ್ವರಂ ನೋಡುತ್ತ ಕೂಡುತ್ತ
    ನಲವಿಂದ ನೃತ್ಯಮಂ ಮಾಡುತ್ತ ಪಾಡುತ್ತ
    ಸೆಳಸಿ ಸರಸೋಕ್ತಿಗಳನಾಡುತ್ತ ತೀಡುತ್ತ ಬೆಳ್ನಗೆಯ ಬೆಡಂಗುಗಳನು
    ಅಲರ್ಗಳಂ ತೆಗೆತೆಗೆದು ನೀಡುತ್ತ ಸೂಡುತ್ತ
    ಲಲಿತ ಮಧು ಚಷಕಮಂ ಬೇಡುತ್ತ ಕಾಡುತ್ತ
    ಕಲೆಗಳ ವಿಲಾಸಮಂ ಪೂಡುತ್ತ ಕೂಡುತ್ತ ಕಣ್ಗೆಸೆದೆದರೆಳೆವೆಣ್ಗಳು

28. ಶ್ರೀಕೃಷ್ಣನು ಅಗ್ರಪೂಜೆಗೆ ಅರ್ಹನೆಂದು ಹೇಳಿದಾಗ ಶಿಶುಪಾಲನು ಕೃಷ್ಣನನ್ನು ನಿಂದಿಸಿ ಆಡಿದ ಮಾತುಗಳು ಯಾವುವು ? ವಿವರಿಸಿರಿ.

29. ನೀವು ಕೈಗೊಂಡ ಪ್ರೇಕ್ಷಣೀಯ ಸ್ಥಳವೊಂದರ ಪ್ರವಾಸದ ಅನುಭವಗಳನ್ನು ಬರೆಯಿರಿ.

### B

**(30 ರಿಂದ 32 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದು ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ)** **(2 × 6 = 12)**

30. 'ಇಡ್ಲಿ' ಪದದ ಹುಟ್ಟು, ವಿಕಾಸದ ಕುರಿತು ಪಾಠದ ಹಿನ್ನೆಲೆಯಲ್ಲಿ ಟಿಪ್ಪಣಿ ಬರೆಯಿರಿ.

31. ಮುನಿಗಳು ಮತ್ತು ಸಿರಿಯರಸನ ನಡುವೆ ನಡೆದ ಮಾತುಕತೆಯ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

32. ಇಳೆಯಾಂಡ ಗುಡಿಮಾರನ ದಾನಗುಣವನ್ನು ವಿವರಿಸಿರಿ.

## PART-V

### A

**(33 ರಿಂದ 35 ರ ವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಒಂದೂವರೆ ಪುಟಕ್ಕೆ ಕಡಿಮೆಯಾಗದಂತೆ ಉತ್ತರಿಸಿರಿ)** **(2 × 8 = 16)**

33. 'ಉಲ್ಲಂಘಿಸುವರುಂಟೆ ವಿಧಿಕೃತವನು' ಕಾವ್ಯಭಾಗದಲ್ಲಿ ಬಂದಿರುವ ಕಥೆಯನ್ನು ಸಂಗ್ರಹಿಸಿ ಬರೆಯಿರಿ.

34. ಯುವರಾಜ ಪಟ್ಟವನ್ನು ರಾಮನಿಂದ ತಪ್ಪಿಸಲು ಮಂಥರೆಯು ಮಾಡಿದ ಪ್ರಯತ್ನಗಳೇನು ? ಅದರ ಪರಿಣಾಮವೇನು ? ವಿಶದಪಡಿಸಿರಿ.

35. 'ಧರೆ ಮೆಚ್ಚದಣ್ಣ ಸೋದರರ ಕಾಳಗಕೆ' ಕಾವ್ಯಭಾಗದಲ್ಲಿ ಬಂದಿರುವ ಭರತನ ಪಾತ್ರಚಿತ್ರಣ ಮಾಡಿರಿ.

---